21 MAR 2018



ದಿನಾಂಕ 15-03-2018 ರ ಗುರುವಾರ ಬೆಳಿಗ್ಗೆ 11-00 ಗಂಟೆಗೆ ಶ್ರೀ ಇ. ರವಿಶಂಕರ್, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರ ಅಧ್ಯಕ್ಷತೆಯಲ್ಲಿ ಪಾಂಡವಪುರ ಉಪವಿಭಾಗ ಕಛೇರಿಯ ಆವರಣದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

<u>ಹಾಜರಿದ್ದ ಅಧಿಕಾರಿಗಳು / ನೌಕರರು</u>
<u>ಶ್ರೀಯುತ:</u>

1. ಎನ್. ಶ್ರೀನಿವಾಸಮೂರ್ತಿ : ಕಾನಿಇಂ(ವಿ), ಪಾಂಡವಪುರ ವಿಭಾಗ.
2. ವಿ. ಪುಟ್ಟಸ್ವಾಮಿ : ಸಕಾನಿಇಂ(ವಿ), ಪಾಂಡವಪುರ ಉಪವಿಭಾಗ.
3. ಆರ್.ಟಿ. ಚಂದ್ರಮೌಳಿ : ಸಕಾನಿಇಂ(ವಿ), ಪಾಂಡವಪುರ ವಿಭಾಗ.
4. ಹೆಚ್.ಇ. ಮಹದೇವ : ಸಇಂ(ವಿ), ಪಟ್ಟಣ ಶಾಖೆ, ಪಾಂಡವಪುರ ಉಪವಿಭಾಗ.
5. ಬಿ. ನಂದೀಶ್ : ಪ್ರಭಾರ ಸಇಂ(ವಿ), ಟಿ.ಎಸ್. ಛತ್ರ ಶಾಖೆ.
6. ಎಂ.ಬಿ. ಚಲುವರಾಜು : ಪ್ರಭಾರ ಸಇಂ(ವಿ), ಮೇಲುಕೋಟೆ ಶಾಖೆ.
7. ಜಿ. ಸುಷ್ಮ : ಕಿಇಂ(ವಿ), ಚಿನಕುರಳಿ ಶಾಖೆ.
8. ಎಲ್. ಕೃಷ್ಣರಂಗರಾಜು : ಕಿಇಂ(ವಿ), ಮಾಣಿಕ್ಯನಹಳ್ಳಿ ಶಾಖೆ.
9. ಎ.ಬಿ. ಕಿರಣ್ ಕುಮಾರ್ : ಪ್ರಭಾರ ಕಿಇಂ(ವಿ), ಕ್ಯಾತನಹಳ್ಳಿ ಶಾಖೆ.
10. ವಿ. ಕೃಷ್ಣಮೂರ್ತಿ : ಪ್ರಭಾರ ಕಿಇಂ(ವಿ), ಬನ್ನಂಗಾಡಿ ಶಾಖೆ.
11. ಮುತ್ತುರಾಜು : ಹಿರಿಯ ಸಹಾಯಕ, ವಿಭಾಗೀಯ ಕಛೇರಿ, ಪಾಂಡವಪುರ.
12. ಜೆ. ಚೇತನ್ : ಪ್ರಭಾರ ಸಇಂ(ತಾಂ), ಪಾಂಡವಪುರ ಉಪವಿಭಾಗ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ಉಪವಿಭಾಗ, ಪಾಂಡವಪುರ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರ ಮೌಖಿಕವಾಗಿ ತಿಳಿಸಿದ / ಲಿಖಿತ ಮನವಿಗಳಲ್ಲಿ ಉಲ್ಲೇಖಿಸಿರುವ ವಿದ್ಯುತ್ ಸಂಬಂಧ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ / ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತವೆ.

1. <u>ಶ್ರೀ ರಮೇಶ್, ಕೃಷ್ಣಾನಗರ 5 ನೇ ಹಂತ, ಪಾಂಡವಪುರ ಟೌನ್.</u>

<u>ದೂರು:</u> ಸದರಿಯವರ ಮನೆಯ ಹತ್ತಿರ ಶಿಥಿಲವಾದ ಕಂಬ ಮತ್ತು ಹಳೆಯ ತಂತಿಯಿರುವುದನ್ನು ಬದಲಿಸಲು ಕೋರಿರುತ್ತಾರೆ.

<u>ಕ್ರಮ:</u> ಪಟ್ಟಣದಲ್ಲಿ ಪ್ರಸ್ತುತ IPDS ಕಾಮಗಾರಿಯು ಚಾಲನೆಯಿದ್ದು, ಕಾಮಗಾರಿ ಕೆಲಸಗಳು ಪ್ರಗತಿಯಲ್ಲಿರುವುದರಿಂದ, ಮುಂದಿನ ವಾರದಲ್ಲಿ ತಮ್ಮ ಏರಿಯಾದಲ್ಲಿಯೂ ಕೆಲಸ ನಿರ್ವಹಿಸಲಾಗುವುದೆಂದು ತಿಳಿಸಲಾಯಿತು.

72

2. <u>ಶ್ರೀ ಸಣ್ಣಮಾಂಗೌಡ, ಅರಳಕುಪ್ಪೆ ಗ್ರಾಮ, ಮೊಬೈಲ್ ನಂ. 98440 44200.</u>

<u>ದೂರು:</u> ಸದರಿಯವರ ಜಮೀನಿನಲ್ಲಿ ಹಾದು ಹೋಗಿರುವ ಎಲ್.ಟಿ. ವಿದ್ಯುತ್ ಮಾರ್ಗವನ್ನು ಮನೆ ನಿರ್ಮಿಸಬೇಕಾಗಿರುವುದರಿಂದ ಬೇರೆಡೆ ಸ್ಥಳಾಂತರಿಸಲು ಕೋರಿರುತ್ತಾರೆ.

<u>ಕ್ರಮ:</u> ಮನವಿ ಸಲ್ಲಿಸಿ, ಅಂದಾಜುಪಟ್ಟಿಯ ಮೊತ್ತಕ್ಕೆ ಶೇಕಡಾ 10 ರಷ್ಟು ಹಣ ಪಾವತಿಸಿ, ಸ್ವಯಂ ನಿರ್ವಹಣಾ ಕಾಮಗಾರಿ ಯೋಜನೆಯಡಿಯಲ್ಲಿ ಕಾಮಗಾರಿ ಪೂರೈಸಿಕೊಳ್ಳಬಹುದೆಂದು ತಿಳಿಸಲಾಯಿತು.

3. <u>ಶ್ರೀ ಕಿರಣ್, ಮೊಬೈಲ್ ನಂ. 94802 88775, ಶ್ರೀ ಪುಟ್ಟಸ್ವಾಮಿ, ಮೊಬೈಲ್ ನಂ. 95912 21974, ಶ್ರೀ ಗಜೇಂದ್ರ, ಮೊಬೈಲ್ ನಂ. 97409 33826 ಮತ್ತು ಶ್ರೀ ಕುಮಾರ್ ಮೊಬೈಲ್ ನಂ. 90085 87034, ಮೇಣಾಗರ ಗ್ರಾಮ.</u>

4. <u>ಶ್ರೀ ಜಯರಾಮೇಗೌಡ, ನಲ್ಲಹಳ್ಳಿ ಗ್ರಾಮ, ಮೊಬೈಲ್ ನಂ. 9972 171052.</u>

<u>ದೂರು:</u> ಸದರಿಯವರು 66/11 ಕೆವಿ ಡಿ.ಬಿ. ಹಳ್ಳಿ ವಿ.ವಿ. ಕೇಂದ್ರದಿಂದ ಬರುವ 11 ಕೆವಿ ಎಫ್-1 ಕಾಳೇನಹಳ್ಳಿ ಫೀಡರ್ ಅಧಿಕ ಭಾರದಿಂದಾಗಿ ಕಳೆದ 3 ದಿನಗಳಿಂದ ಫೀಡರ್ ಆಗಿಂದಾಗ್ಗೆ ಟ್ರಿಪ್ ಆಗುತ್ತಿರುತ್ತದೆಂದು, ಸರಿಯಾಗಿ ವಿದ್ಯುತ್ ಸರಬರಾಜು ಮಾಡಿರೆಂದು ಆಗ್ರಹಿಸಿದರು.

<u>ಕ್ರಮ:</u> ಎಫ್-1 ಕಾಳೇನಹಳ್ಳಿ ಫೀಡರ್ 210 ಆಂಪ್ಸ್ ಅಧಿಕ ಭಾರದಿಂದಾಗಿ ಟ್ರಿಪ್ ಆಗುತ್ತಿದ್ದು, ಈ ಸಭೆ ಮುಗಿದ ಕೂಡಲೇ ಶಾಖಾಧಿಕಾರಿಯವರನ್ನು ಕಳುಹಿಸಿ, ಎಫ್-5 ಮೂಡಲಕೊಪ್ಪಲು ಫೀಡರಿನ ಮೇಲೆ ಸ್ವಲ್ಪ ಭಾರವನ್ನು ಬದಲಾಯಿಸಿ, ವಿದ್ಯುತ್ ವ್ಯತ್ಯಯವಾಗದಂತೆ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿ, ಹಾಗೆಯೇ ಕ್ರಮ ವಹಿಸಲಾಯಿತು.

5. <u>ಶ್ರೀ ಬೆಟ್ಟೇಗೌಡ, ಅತ್ತಿಗಾನಹಳ್ಳಿ ಗ್ರಾಮ, ಮೊಬೈಲ್ ನಂ. 99006 68028.</u>

<u>ದೂರು:</u> BPL ಫಲಾನುಭವಿಯಾದ ನನಗೆ ಉಚಿತ ವಿದ್ಯುತ್ ಸಂಪರ್ಕ ಕೊಡಿಸಿರೆಂದು ಕೋರಿದರು.

<u>ಕ್ರಮ:</u> ನಿಮ್ಮ BPL ಕಾರ್ಡ್ ಮತ್ತು ಆಧಾರ್ ಕಾರ್ಡ್ ಪ್ರತಿಗಳನ್ನು ನೀಡಿರಿ, ಸ್ಥಳ ಪರಿಶೀಲಿಸಿ, ಅರ್ಹರಿದ್ದಲ್ಲಿ DDUGJY ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದೆಂದು ತಿಳಿಸಲಾಯಿತು. ಆದರೆ, ಮುಂದೆ ತಾವು ಎಲ್.ಟಿ-2(ಎ) ಜಕಾತಿಯಲ್ಲಿ ಬಿಲ್ಲನ್ನು ಪ್ರತಿತಿಂಗಳು ಪಾವತಿಸಬೇಕಾಗುತ್ತದೆಂದು ತಿಳಿಸಲಾಯಿತು.

6. <u>ಶ್ರೀ ಜಯರಾಮೇಗೌಡ, ನಲ್ಲಹಳ್ಳಿ ಗ್ರಾಮ, ಮೊಬೈಲ್ ನಂ. 99721 71052.</u>

<u>ದೂರು:</u> ಮನೆಯ ಮುಂದೆ ಟಿ.ಸಿ. ಯಿದ್ದು, ಅದನ್ನು ಪಕ್ಕಕ್ಕೆ ಸ್ಥಳಾಂತರಿಸಲು ಕೋರಿರುತ್ತಾರೆ.

<u>ಕ್ರಮ:</u> ಮನವಿ ಸಲ್ಲಿಸಿ, ಅಂದಾಜುಪಟ್ಟಿಯ ಮೊತ್ತಕ್ಕೆ ಶೇಕಡಾ 10 ರಷ್ಟು ಹಣ ಪಾವತಿಸಿ, ಸ್ವಯಂ ನಿರ್ವಹಣಾ ಕಾಮಗಾರಿ ಯೋಜನೆಯಡಿಯಲ್ಲಿ ಕಾಮಗಾರಿ ಪೂರೈಸಿಕೊಳ್ಳಬಹುದೆಂದು ತಿಳಿಸಲಾಯಿತು.

7. <u>ಶ್ರೀ ಚಂದ್ರಶೇಖರ ಬಿನ್ ಚಿಕ್ಕ ಹೊನ್ನೇಗೌಡ, ಸುಂಕಾತೊಣ್ಣೂರು ಗ್ರಾಮ, ಮೊಬೈಲ್ ನಂ. 89702 73173.</u>

<u>ದೂರು:</u> ನಾನು ಕೋಳಿ ಫಾರಂ ನಡೆಸಲು ಉದ್ದೇಶಿಸಿದ್ದು, ಸಂಪರ್ಕ ನೀಡಲು ಬರುವುದಿಲ್ಲವೆಂದು ಮಾಣಿಕ್ಯನಹಳ್ಳಿ ಶಾಖಾಧಿಕಾರಿಯವರು ತಿಳಿಸಿರುತ್ತಾರೆ. ಹಾಗಾದರೆ, ನನಗೆ ವಿದ್ಯುತ್ ಸಂಪರ್ಕ ನೀಡುವುದಿಲ್ಲವೇ? ಎಂದು ಪ್ರಶ್ನಿಸಿರುತ್ತಾರೆ.

<u>ಕ್ರಮ:</u> ಈ ಸಂಬಂಧ ಮಾಣಿಕ್ಯನಹಳ್ಳಿ ಶಾಖಾಧಿಕಾರಿಯವರಿಗೆ ವಿಚಾರಿಸಲಾಗಿ, ತಾಂತ್ರಿಕ ಕಾರಣದ ನೆಪ ಹೇಳಿದರು. ಅದಕ್ಕೆ ಗ್ರಾಹಕರಿಗೆ ನೀವು ಅರ್ಜಿ ನೋಂದಾಯಿಸಿ, ನಿಯಮಾನುಸಾರ ವಿದ್ಯುತ್ ಸಂಪರ್ಕ ನಿಮಗೆ ನೀಡಲೇಬೇಕು. ತಾಂತ್ರಿಕ ಸಮಸ್ಯೆಯನ್ನು ಇಲಾಖೆಯು ಪರಿಹರಿಸುತ್ತದೆಂದು ತಿಳಿಸಲಾಯಿತು.

8. <u>ಶ್ರೀ ರಾಘವೇಂದ್ರ, ಹೊಸಕೋಟೆ ಗ್ರಾಮ, ಮೊಬೈಲ್ ನಂ. 90081 39442.</u>

<u>ದೂರು:</u> ನಾವು ನಿರ್ವಹಿಸುತ್ತಿರುವ ಹೊಸಕೋಟೆ, ಚಿಟ್ನಳ್ಳಿ ಮತ್ತು ಮೂಡಲಕೊಪ್ಪಲು BMC ಗಳಿಗೆ, ಪರಿವರ್ತಕ ಅಳವಡಿಸಲು ಹಣ ಪಾವತಿಸಿದ್ದು, ಕಾಮಗಾರಿ ಕೆಲಸವು ಪೂರ್ಣಗೊಂಡಿದ್ದು, ಪರಿವರ್ತಕಗಳು ಬೇಕಾಗಿರುತ್ತವೆ. ಆದಷ್ಟು ಶೀಘ್ರವಾಗಿ ಒದಗಿಸಿ, ವಿದ್ಯುತ್ ಸಂಪರ್ಕ ನೀಡಿರೆಂದು ಕೋರಿರುತ್ತಾರೆ.

<u>ಕ್ರಮ:</u> ಕಾನಿಇಂ(ವಿ), ಪಾಂಡವಪುರ ರವರು ದಿನಾಂಕ 17-03-2018 ರಂದು 25 ಕೆವಿಎ ಪರಿವರ್ತಕಗಳು ಉಗ್ರಾಣಕ್ಕೆ ಬರುತ್ತವೆ. ಬಂದ ತಕ್ಷಣವೇ ತಮಗೆ ನೀಡಿ, ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದೆಂದು ತಿಳಿಸಿದರು.

9. <u>ಶ್ರೀ ಕಾಳೇಗೌಡ, ಕಾಳೇನಹಳ್ಳಿ ಗ್ರಾಮ, ಮೊಬೈಲ್ ನಂ. 96632 70574.</u>

<u>ದೂರು:</u> ಊರಿನೊಳಗಡೆ ಕಂಬಗಳು ಶಿಥಿಲವಾಗಿರುತ್ತವೆ ಮತ್ತು ಹಳೆಯದಾದ ತಂತಿಗಳಿದ್ದು, ಬದಲಿಸಿರೆಂದು ಕೋರಿದರು.

<u>ಕ್ರಮ:</u> ಪಟ್ಟಣ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ, ಅಂದಾಜುಪಟ್ಟಿ ಸಲ್ಲಿಸುವಂತೆ ಸೂಚಿಸಲಾಯಿತು.

10. <u>ಶ್ರೀ ರಾಮೇಗೌಡ, ನುಗ್ಗಹಳ್ಳಿ ಗ್ರಾಮ.</u>

<u>ದೂರು:</u> ನಮ್ಮ ಐ.ಪಿ. ಸ್ಥಾವರಕ್ಕಿರುವ 100 ಕೆವಿಎ ಪರಿವರ್ತಕದ ವೈರು ಕಟ್ ಆಗಿ, ನಮಗೆ ವಿದ್ಯುತ್ ಸಂಪರ್ಕವಿಲ್ಲವೆಂದು ಮತ್ತು ಕಂಬಗಳ ನಡುವಿನ ಅಂತರ ಹೆಚ್ಚಿದ್ದು, ವೈರುಗಳು ಜೋತಾಡುತ್ತಿರುತ್ತವೆ. ಕಂಬಗಳನ್ನು ಹಾಕಿ ಕೊಡಲು ಕೋರಿದರು.

<u>ಕ್ರಮ:</u> ಟಿ.ಎಸ್. ಛತ್ರ ಶಾಖಾಧಿಕಾರಿಯವರಿಗೆ ವಿಚಾರಿಸಲಾಗಿ, ಈಗಾಗಲೇ ತುಂಡಾಗಿದ್ದ ವೈರನ್ನು ಎಳೆದು ಸರಿಪಡಿಸಲಾಗಿದೆ, ಮಧ್ಯಂತರ ಕಂಬ ಹಾಕಲು ಅಂದಾಜುಪಟ್ಟಿ ತಯಾರಿಸಿರುವುದಾಗಿ ತಿಳಿಸಿದರು.

11. ಶ್ರೀ ಎನ್.ಕೆ. ಉಮೇಶ್, ಗ್ರಾಮ ಪಂಚಾಯಿತಿ ಸದಸ್ಯರು, ನಲ್ಲಹಳ್ಳಿ ಗ್ರಾಮ, ಮೊಬೈಲ್ ನಂ. 99802 68762.

ದೂರು: ಊರಿನೊಳಗಡೆ ಶಿಥಿಲವಾಗಿರುವ 4 – 5 ಕಂಬಗಳಿದ್ದು, ಬದಲಿಸಲು ಕೋರಿದರು.

ಕ್ರಮ: ಪಟ್ಟಣ ಶಾಖಾಧಿಕಾರಿಯವರಿಗೆ ಅಂದಾಜುಪಟ್ಟಿ ಸಲ್ಲಿಸಲು ಸೂಚಿಸಲಾಯಿತು.

:: ಸಭೆಯನ್ನು ಮಧ್ಯಾಹ್ನ 01-30 ಗಂಟೆಗೆ ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು ::

ಮೆಮೊ ಸಂಖ್ಯೆ: ಸಕಾನಿಇಂ(ವಿ)/ಸಇಂ(ತಾಂ)/ಪಾ.ಪುರ/17-18/ 2753-65 ದಿನಾಂಕ: 17-03-2018

ಪ್ರತಿಯನ್ನು ಇವರ ಅವಗಾಹನೆಗೆ ಸಲ್ಲಿಸಲಾಗಿದೆ:

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ, ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ, ಪಾಂಡವಪುರ.

ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ:

1. ಲೆಕ್ಕಾಧಿಕಾರಿ, ಸೆಸ್ಕ್, ಪಾಂಡವಪುರ.
2. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ವಿಭಾಗೀಯ ಕಛೇರಿ, ಪಾಂಡವಪುರ.
3. ಲೆಕ್ಕಾಧಿಕಾರಿ, ಆಂ.ಪ., ಸೆಸ್ಕ್, ಪಾಂಡವಪುರ.

ಪ್ರತಿಯನ್ನು ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ:

1. ಶಾಖಾಧಿಕಾರಿ, ಸೆಸ್ಕ್, ಕಾರ್ಯ ಮತ್ತು ಪಾಲನಾ ಶಾಖೆ, ಪಟ್ಟಣ (ಪಾಂಡವಪುರ) / ಟಿ.ಎಸ್. ಛತ್ರ / ಚಿನಕುರಳಿ / ಕ್ಯಾತನಹಳ್ಳಿ / ಬನ್ನಂಗಾಡಿ / ಮೇಲುಕೋಟೆ / ಮಾಣಿಕ್ಯನಹಳ್ಳಿ.

ಸಇಂ(ತಾಂ) / ಮುಕ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಸೆಸ್ಕ್, ಪಾಂಡವಪುರ ಉಪವಿಭಾಗ.